***ಕಾವೇರಿ ತೀರ್ಪು ಹೀಗೆ ಬರ್ತದೆ ಅಂತ ನಿಮಗೆ ಗೊತ್ತಿತ್ತಾ?***

ಇತ್ತೀಚಿನ ದಿನಗಳಲ್ಲಿ ಮಾತ್ರವಲ್ಲ ಹೇಳ್ಬೇಕಂದ್ರೆ ಯಾವಾಗ್ಲೂ ನಮ್ಮ ರಾಜ್ಯಕ್ಕೆ ಸಂಬಂಧ ಪಟ್ಟಂತಹ ಯಾವುದೇ ವಿಚಾರದಲ್ಲಿ, ಕೇಂದ್ರದಿಂದ ನಮಗೆ ಯಾವುದೇ ಒಳ್ಳೆಯದಾಗಿಲ್ಲ. ಹಾಗೇ ಕಾವೇರಿ ನ್ಯಾಯಮಂಡಳಿಯಿಂದ್ಲೂ ನಮಗೆ ಒಳ್ಳೆಯದಾಗಲ್ಲ ಅಂತ ನನಗನ್ಸಿತ್ತು ಮತ್ತು ಅದನ್ನ ತುಂಬಾ ಜನರಲ್ಲಿ ಹೇಳ್ಕೊಂಡಿದ್ದೆ, ನಾನು.

***ಅದು ಬರೀ ಅನುಮಾನವಾಗಿತ್ತಾ, ಇಲ್ಲ ಏನಾದ್ರೂ ಆಧಾರ ಇತ್ತಾ?***

ಸ್ವಲ್ಪ ಅನುಮಾನ ಇತ್ತು ಮತ್ತು ನಾನು ಅದಕ್ಕೆ ಸಂಬಂಧ ಪಟ್ಟಹಾಗೆ ಅನೇಕ ಜನರ ಹತ್ತಿರ ಚರ್ಚೆ ಮಾಡಿದ್ದೆ. ಅಧ್ಯಯನ ತಂಡ ಬಂದು ಹಿಂತಿರುಗುವ ಸಂದರ್ಭದಲ್ಲಿ ತಮಿಳು ನಾಡಿನಿಂದ ಆ ತಂಡದವರಿಗೆ ದೊಡ್ಡ ದೊಡ್ಡ ಉಡುಗೊರೆ ಕೊಡಲಾಗಿದೆ ಎನ್ನುವ ಶಂಕೆಯೂ ಇದ್ದಿದ್ದರಿಂದ ಮತ್ತು ಆ ದೂರಿನಿಂದ ನ್ಯಾಯಮಂಡಳಿಯ ಸದಸ್ಯರಿಗೆ ಕೋಪ ಬಂದು ಹೀಗಾಗಿರಬಹುದು ಎನ್ನುವ ಅನುಮಾನವೂ ಇತ್ತು. ಇನ್ನೊಂದೆಡೆ, ಕೇಂದ್ರದಿಂದ ಯಾವುದೇ ರೀತಿಯ ನ್ಯಾಯ ಸಾಧ್ಯವಿಲ್ಲ ಯಾಕಂದ್ರೆ ಕೇಂದ್ರದಲ್ಲಿ ಬಲಿಷ್ಠವಾಗಿ ತಮಿಳುನಾಡಿನ ಶಕ್ತಿಗಳು ಕೆಲಸ ಮಾಡುತ್ತಿವೆ ಅನ್ನೋದು ಗೊತ್ತಿತ್ತು. ಅದೂ ಅಲ್ಲದೆ ಕೇಂದ್ರದಲ್ಲಿ ತಮಿಳು ನಾಡಿನ ಪ್ರಭಾವದ ಅರಿವು ಇರೋದ್ರಿಂದ ನನಗೆ ಆತಂಕ ಕಾಡ್ತಾ ಇತ್ತು.

***ಕಾವೇರಿ ನ್ಯಾಯಮಂಡಳಿಯ ತೀರ್ಪನ್ನ ನೀವು ಓದಿದ್ದೀರಾ?***

ಬಹಳ ದಿನಗಳಿಂದ ತೀರ್ಪಿನ ಪ್ರತಿಯನ್ನ ಪಡೆಯುವ ಪ್ರಯತ್ನ ಮಾಡಿದ್ದೇನೆ, ಆದ್ರೆ ಅದಿನ್ನು ಕೈಗೆ ಬಂದಿಲ್ಲ. ತೀರ್ಪಿನ ಅಂಶಗಳನ್ನ ಮಾಧ್ಯಮಗಳ ಮುಖಾಂತರ ಓದಿ ತಿಳ್ಕೋಬೇಕಾಯ್ತು.

***ಆದ್ರಿಂದ ನೀವೆಲ್ಲಾದ್ರೂ ತೀರ್ಪನ್ನ ಸಂಪೂರ್ಣವಾಗಿ ಅರ್ಥೈಸಿ ಕೊಂಡಿರಲಿಕ್ಕಿಲ್ಲ ಅನ್ನಿಸ್ತಿದೆಯಾ?***

ಇಲ್ಲ, ನಂಜೇಗೌಡರ ಜೊತೆ ಚರ್ಚೆ ಮಾಡಿದ್ದೇನೆ. ಅವ್ರು ಅದರ ಅಂಶಗಳನ್ನೆಲ್ಲ ತಿಳಿಸಿ ಕೊಟ್ಟಿದ್ದಾರೆ. ಆ ಅಂಶಗಳನ್ನ ನೋಡಿದಾಗ ಅಲ್ಲಿ ತೀರ್ಪು ಕೊಡುವಂತಹ ವ್ಯಕ್ತಿಗಳ ಮನಸ್ಸು ಕರ್ನಾಟಕದ ಪರವಾಗಿಲ್ಲದಿರೋದು ಗೋಚರವಾಗುತ್ತೆ. ಬಹಳಷ್ಟು ವಿಚಾರ ಗೋಷ್ಠಿ, ಚಿಂತನಾ ಸಭೆ ಮತ್ತು ಚರ್ಚೆಗಳಲ್ಲಿ ಭಾಗವಹಿಸಿ ಕೂಡ ಬಹಳಷ್ಟು ವಿಚಾರಗಳನ್ನ ತಿಳ್ಕೊಂಡಿದ್ದೇನೆ.

***ನಿಮ್ಮ ಪ್ರಕಾರ ಕರ್ನಾಟಕಕ್ಕೆ ಖಚಿತವಾಗಿ ಅನ್ಯಾಯವಾಗಿದೆಯಾ?***

ಆಗಿದೆ.

***ನಿಮ್ಮ ಪ್ರಕಾರ ಏನು ಅನ್ಯಾಯ?***

ತುಂಬಾ ಅನ್ಯಾಯ ಆಗಿದೆ. ಮಧ್ಯಂತರ ತೀರ್ಪಿಗಿಂತಲೂ ಜಾಸ್ತಿ ನೀರು ಬಿಡೀಂತ ತೀರ್ಪು ಕೊಡಬೇಕಾಗಿದ್ರೆ ಅಲ್ಲೇನೋ ಹುನ್ನಾರ ನಡೆದಿರಬಹುದು ಅಂತ ಅನ್ನಿಸ್ತದೆ. ಉದ್ದೇಶಪೂರ್ವಕವಾಗಿಯೇ ನಮಗೆ ಅನ್ಯಾಯ ಮಾಡಿದ್ದಾರೆ, ಅನ್ನಿಸ್ತದೆ.

***ಈಗ ಕರ್ನಾಟಕ ರಕ್ಷಣಾ ವೇದಿಕೆಗೆ ಇಷ್ಟೊಂದು ಬೆಂಬಲ ವ್ಯಕ್ತವಾಗ್ತಾ ಇದೆ. ನಿರ್ದಿಷ್ಟವಾಗಿ ನಿಮ್ಮ ಸಂಘಟನೆಗೇ ಅಷ್ಟೊಂದು ಬೆಂಬಲ ವ್ಯಕ್ತವಾಗೋದಿಕ್ಕೆ ಏನು ಕಾರಣವಿರಬಹುದು?***

ಕರ್ನಾಟಕ ರಕ್ಷಣಾ ವೇದಿಕೆಯ ಹೋರಾಟವನ್ನ ಕರ್ನಾಟಕದಾದ್ಯಂತ ಜನ ಒಪ್ಕೊಂಡಿದ್ದಾರೆ. ನಾವು ಏನೇ ಒಂದು ಹೋರಾಟವನ್ನ ಕೈಗೆತ್ತಿಕೊಂಡಾಗ ಕೇವಲ ಪಚಾರ ದೃಷ್ಟಿಯಿಂದಲಾಗಲೀ ಸ್ವಾರ್ಥ ಸಾಧನೆಗೋಸ್ಕರವಾಗಲೀ ಮಾಡೋದಿಲ್ಲ. ನಾವು ಏನೇ ಹೋರಾಟವನ್ನ ಕೈಗೆತ್ತಿಕೊಂಡರೂ ಸಹ ಅದರ ಹಿಂದೆ ಏನೋ ಸತ್ಯ ಇರುತ್ತೆ ಮತ್ತು ಹೋರಾಟದಲ್ಲಿ ರಾಜಿ ಮತ್ತು ರಾಜಕೀಯ ಇಲ್ಲದಂತೆ ಮತ್ತು ಯಾರಿಗೂ ವ್ಯಣೆಯದೆ, ನಾಡು ನುಡಿ ಮತ್ತು ನಾಡಿಗೆ ಸಂಬಂಧ ಪಟ್ಟಂತಹ ವಿಚಾರಗಳಲ್ಲಿ ನಮ್ಮಲ್ಲಿ ಗಟ್ಟಿತನ ಇದೆ ಎಂಬ ಕಾರಣಕ್ಕಾಗಿ ನಮ್ಮನ್ನ ಬೆಂಬಲಿಸ್ತಾರೆ. ಇವತ್ತು ಕರ್ನಾಟಕ ಮಾತ್ರವಲ್ಲದೆ ವಿದೇಶಗಳಲ್ಲಿರುವ ಕನ್ನಡಿಗರೂ ಬೆಂಬಲವನ್ನ ವ್ಯಕ್ತ ಪಡಿಸಿದ್ದಾರೆ.

***ಆದ್ರೆ ತೀರ್ಪು ಬಂದಂತಹ ಸಮಯದಲ್ಲಿ ಬಹಳಷ್ಟು ಮಂದಿ, ಹೋರಾಟದ ಹೆಸರಲ್ಲಿ, ಹಿಂಸೆಯಾಗಬಹುದು ಅಂತ ಆತಂಕ ಪಟ್ಟಿದ್ರಲ್ಲ? ನಿಮ್ಮ ಸಂಘಟನೆಯಲ್ಲೂ ಹಿಂಸೆ ಮಾಡ್ಲಿಕ್ಕೆ ಅವಕಾಶ ಕಾಯುವ ವ್ಯಕ್ತಿಗಳೂ ಇದ್ದಾರೆ ಅಂತಾರಲ್ಲ?***

ಹಿಂಸೆ ಮಾಡುವ ಮತ್ತು ಹಿಂಸೆಗೆ ಪ್ರಚೋದನೆ ಮಾಡುವ ಜನ ನಮ್ಮಲ್ಲಿದ್ರು, ಆ ಶಕ್ತಿಗಳು ಇವತ್ತು ಕರ್ನಾಟಕ ರಕ್ಷಣಾ ವೇದಿಕೆಯಲ್ಲಿ ಇಲ್ಲ. ಅವರು ಹೊರ ಹೋಗಿರೋದ್ರಿಂದ ಒಂದು ರೀತಿಯಲ್ಲಿ ವೇದಿಕೆ ಬಹಳ ಶುದ್ದವಾಗಿದೆ. ತೊಂಬತ್ತೊಂದರಲ್ಲಿ ನಡೆದ ಗಲಭೆಯ ಸಂದರ್ಭದಲ್ಲಿ ಪರಿಸ್ಥಿತಿ ಬಹಳವೇ ಬೇರೆಯಾಗಿತ್ತು. ಆಗ ಒಂದು ಭಾಷೆಯ ಜನರ ಅಟ್ಟಹಾಸ ಕಂಡು ಬರ್ತಿತ್ತು. ಈ ನಾಡಿನ ಭಾಷೆಯ ಮೇಲೆ ಮತ್ತು ಜನರ ಮೇಲೆ ಒಂದು ರೀತಿಯ ದಬ್ಬಾಳಿಕೆ, ದೌರ್ಜನ್ಯ ನಡೆಸ್ತಾ ಇದ್ರು. ಈ ಹಿಂದೆ ಶ್ರೀರಾಂಪುರದಲ್ಲಿ ಕನ್ನಡ ಮಾತಾಡಿದ್ರೆ ಮುಖದ ಮೇಲೆ ಕುರೂಪ ಹಾಕ್ತಿದ್ರು. ಅದು ಮಿನಿ ಶ್ರೀಲಂಕಾದ ರೀತಿ ಇತ್ತು. ಅಲ್ಲಿ ರಾಜಕೀಯ ಕಾರಣಗಳಿಂದಲೂ ಬಹಳಷ್ಟು ಭಾಷಾ ಗಲಭೆಗಳು ನಡೀತಿದ್ವು. ಅದ್ರಿಂದೆಲ್ಲಾ ನೊಂದಿದ್ದಂತಹ ಜನ ತೊಂಬತ್ತೊಂದರಲ್ಲಿ ಸ್ವಲ್ಪ ಹಿಂಸೆ ಮತ್ತು ದಾಂಧಲೆಗೆ ಇಳಿದ್ರು. ಈಗ ಪರಿಸ್ಥಿತಿ ಬೇರೆಯಾಗಿದೆ. ಶ್ರೀರಾಂಪುರದಂತಹ ಪ್ರದೇಶದಲ್ಲೂ ಸ್ವಲ್ಪ ಕನ್ನಡದ ವಾತಾವರಣ ನಿರ್ಮಾಣವಾಗಿದೆ. ಅಂತಹ ಪ್ರದೇಶಗಳಲ್ಲಿ ಸಭೆ ಸಮಾರಂಭಗಳನ್ನು ಮಾಡಿದಾಗ ನಾವು ಅವರಿಗೆ ಕನ್ನಡಿಗರು ತಮಿಳುನಾಡಿನಲ್ಲಿ ಹೇಗೆ ನಡ್ಕೋತಿದ್ದಾರೆ ಮತ್ತು ಇಲ್ಲಿ ತಮಿಳರಿಗೆ ಎಷ್ಟು ಸ್ವಾತಂತ್ರ್ಯವಿದೆ ಆದ್ದರಿಂದ

ಅನಾವಶ್ಯಕವಾಗಿ ಅವರು ಕನ್ನಡಿಗರ ಮುಂದೆ ಮೆರೆಯಬಾರದು, ನಮಗೆ ಅದನ್ನ ಸಹಿಸ್ಕೊಳ್ಳಿಕ್ಕಾಗೋದಿಲ್ಲ ಅಂತ ತಿಳಿಸಿಕೊಟ್ಟದ್ರಿಂದ, ಈಗ ವಾತಾವರಣ ಬದಲಾಗಿದೆ.

***ಹಾಗಾದ್ರೆ ನಿಮ್ಮ ಹೋರಾಟ ಕರ್ನಾಟಕದಲ್ಲಿರುವ ತಮಿಳಿಗರ ವಿರುದ್ಧ ಅಲ್ಲ?***

ಅಲ್ಲ ಅಲ್ಲ ಅಲ್ಲ. ಯಾವುದೇ ಭಾಷಿಕರ ವಿರುದ್ಧ ಅಲ್ಲ.

***ತಮಿಳುನಾಡಿನ ಬಸ್ಸುಗಳಿಗೆ ಕಲ್ಲು ಹೊಡೆಯೋದು, ಲಾರಿಗಳನ್ನ ಜಖಂ ಗೊಳಿಸೋದು, ತಮಿಳು ಪತ್ರಿಕೆಗಳನ್ನ ಸುಟ್ಟು ಹಾಕೋದು, ಎಲ್ಲಾ ಆಗಿದೆ. ಅದನ್ನೆಲ್ಲಾ ಮಾಡಿದವರು ರಕ್ಷಣಾ ವೇದಿಕೆಯ ಕಾರ್ಯಕರ್ತರು ಅಂತೆಲ್ಲಾ ಹೇಳ್ತಾರೆ. ಆದ್ರೆ ನೀವು ಮಾತ್ರ ತಮಿಳು ಭಾಷೆಯ ವಿರುದ್ಧ ಅಲ್ಲ, ತಮಿಳಿಗರ ವಿರುದ್ಧ ಅಂತ ಹೇಳ್ತೀರಲ್ಲ?***

ನಾವು ತಮಿಳು ಭಾಷಿಕರ ವಿರುದ್ಧ ಅಲ್ಲ, ಆದ್ರೆ ತಮಿಳು ಭಾಷೆಯ ವಿರುದ್ಧ ಇದ್ದೇವೆ. ತಮಿಳಿಗರು ಇಲ್ಲಿ ಬದುಕ್ತಾ ಇದ್ದಾರೆ. ಈ ನಾಡಿನ ಭಾಷೆಯನ್ನ ಕಲಿತುಕೊಳ್ಳಬೇಕು, ನಾಡಿನ ಜನರಾಗಿ ಬೆರೆಯಬೇಕು. ಇಲ್ಲಿ ನಿಮಗೆ ತಮಿಳು ಭಾಷೆ ಬೇಕು ತಮಿಳು ಸಿನೆಮಾ ಬೇಕು ತಮಿಳು ಮನರಂಜನೆನೇ ಬೇಕು ಎಂದರೆ ಹೇಗೆ? ಹಾಗಾದ್ರೆ ನೀವು ತಮಿಳುನಾಡಿನಲ್ಲಿ ಕನ್ನಡಗರಿಗೆ ಏನು ಅವಕಾಶ ಮಾಡಿಕೊಟ್ಟಿದ್ದೀರ ಎಂದು ಕೇಳಬೇಕಾಗ್ತದೆ. ತಮಿಳು ನಾಡಿನಲ್ಲಿ ಕನ್ನಡಿಗರು, ಆ ಮಣ್ಣು ಅವರಿಗೆ ಬದುಕು ಕೊಟ್ಟಿರೋದ್ರಿಂದ ಅವರು ಆ ನೆಲ ಮತ್ತು ಭಾಷೆಯನ್ನ ಗೌರವಿಸಿದ್ದಾರೆ. ಈ ಕಾವೇರಿ ಹೋರಾಟದ ಸಂದರ್ಭದಲ್ಲೂ ಇಲ್ಲಿ ತಮಿಳು ಸಿನೆಮಾ ಬೇಕು, ತಮಿಳು ಭಾಷಾ ಪತ್ರಿಕೆಗಳು ಬೇಕು ಅಂತೆಲ್ಲ ಹೇಳಿದ್ರೆ ಹೇಗೆ ಸಹಿಸ್ಕೊಳ್ಳಿಕ್ಕಾಗ್ತದೆ?

***ಹಿಂಸೆಯಿಂದ ಒಳ್ಳೆಯದಾಗೋದಿದ್ರೆ, ಹಿಂಸೆಗೆ ನಿಮ್ಮ ಬೆಂಬಲ ಇದೆಯಾ?***

ಇಲ್ಲ ಇಲ್ಲ. ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರಿಗೆ ನಾನು ಹೇಳ್ತೀನಿ, 'ಯಾವುದೇ ಕಾರಣಕ್ಕೂ ಪ್ರಾಣ ಹಾನಿಯಾಗಬಾರದು. ಎಲ್ಲೂ ಅಂತಹ ಪ್ರಮಾದಗಳಾಗಬಾರದು.' ಇವತ್ತು ಕರ್ನಾಟಕ ರಕ್ಷಣಾ ವೇದಿಕೆ ಕಾನೂನು ಕೈಗೆತ್ತಿಕೊಂಡಿದ್ರೆ ಭಾರೀ ಗಲಭೆಗಳಾಗೋದು, ಭಾರೀ ತರಹದ ಅನಾಹುತಗಳಾಗಬಹುದಿತ್ತು. ಆದ್ರೆ ಎಲ್ಲೂ ಹಾಗೆ ಆಗ್ಲಿಲ್ಲ. ಕಾನೂನಿನ ಚೌಕಟ್ಟಿನಲ್ಲೇ ಹೋರಾಟ ಮಾಡೀಂತ ಹೇಳಿದ್ದೇನೆ. ಕೆಲವೊಮ್ಮೆ ಸಣ್ಣ ಪುಟ್ಟ ಘಟನೆಗಳು ನಡೀತವೆ. ಅದು ರಕ್ಷಣಾ ವೇದಿಕೆಯ ಹೆಸರಲ್ಲಾಗಿರಬಹುದು ಇಲ್ಲ ರಕ್ಷಣಾ ವೇದಿಕೆಯ ಕಾರ್ಯಕರ್ತರು ಮಾಡಿರಲೂ ಬಹುದು.

***ಕೆಲವೊಂದು ಸಂದರ್ಭಗಳಲ್ಲಿ ವಿಷಯವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳದೇ ಹೋರಾಟ ಆರಂಭಿಸಿ ಬಿಡ್ತೀರ ಅಂತ ಹೇಳ್ತಾರಲ್ಲ?***

ಇಲ್ಲ, ಯಾವುದೇ ವಿಚಾರವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿದ ನಂತರವೇ ನಾವು ಹೋರಾಟಕ್ಕೆ ಕರೆ ನೀಡೋದು.

***ಒಂದೋ ಎರಡೋ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಅವನ್ನ ತಾರ್ಕಿಕ ಅಂತ್ಯಕ್ಕೆ ತಲುಪಿಸುವ ಬದಲು, ಒಂದೇ ಸಲಕ್ಕೆ ಅನೇಕ ಹೋರಾಟಗಳನ್ನ ಆರಂಭಿಸಿ ಬಿಡ್ತೀರ, ಅದ್ರಿಂದ ಯಾವುದೂ ಸರಿಯಾಗಿ ಇತ್ಯರ್ಥವಾಗೋದಿಲ್ಲ, ಅಂತ ಹೇಳ್ತಾರಲ್ಲ?***

ರಕ್ಷಣಾ ವೇದಿಕೆ, ನನ್ನ ನಾಯಕತ್ವದಲ್ಲಿ, ಇವತ್ತಿನ ತನಕ ಯಾವುದೇ ಹೋರಾಟವನ್ನ ಕೈಗೆತ್ತಿಕೊಂಡ್ರೂ ಅದರಲ್ಲಿ ಯಶಸ್ಸು ಸಿಗೋವರ್ಗೂ, ಇಲ್ಲ ಒಂದಿಷ್ಟು ಪರಿಹಾರ ಸಿಗೋವರ್ಗೂ ಮಾಡಿದ್ದೇವೆ. ನಾವು ಇನ್ನೊಬ್ಬರ ತರಹ, ಯಾವುದೋ ಒಂದು ಹೋರಾಟ ಕೈಗೆತ್ತಿಕೊಳ್ಳೋದು ನಾಳೆ ಮಾಧ್ಯಮದಲ್ಲಿ ಬಂದ ತಕ್ಷಣ ಆ ಹೋರಾಟವನ್ನ ಅಲ್ಲಿಗೇ ನಿಲ್ಸಿಬಿಡುವ ಕೆಲಸವನ್ನ ಮಾಡಿಲ್ಲ.

***ನೀವು ರಕ್ಷಣಾ ವೇದಿಕೆಯ ಮೂಲಕ ಹೋರಾಟ ಮಾಡ್ತೀರ, ಜನರನ್ನ ಸಂಘಟಿಸ್ತೀರ, ಅದೆಲ್ಲ ಸತ್ಯ, ಆದ್ರೂ ಕೂಡ ಈ ನಾರಾಯಣಗೌಡರನ್ನ ಬೆಳೆಸಿದವರು ಮಾಧ್ಯಮದವರು ಅಂತಾರಲ್ಲ?***

ಇರಬಹುದು.

***ನಿಮಗೆ ಮಾಧ್ಯಮದ ಅವಶ್ಯಕತೆಯ ಅರಿವಾಗಿದೆ, ಅಂತ?***

ಪ್ರಾರಂಭದಲ್ಲಿ, ಮಾಧ್ಯಮದಲ್ಲಿ ಎಲ್ಲರಿಗೂ ಪ್ರಚಾರ ಕೊಡ್ತಾರೆ ಆದ್ರೆ, ಪ್ರಚಾರಕ್ಕಂತಲೇ ಹೋರಾಟಾಂತ ಮಾಧ್ಯಮದ ಜನರಿಗೆ ಗೊತ್ತಾದಾಗ ಅವರು ಪ್ರಚಾರ ಕೊಡೋದನ್ನ ಕಡಿಮೆ ಮಾಡ್ತಾರೆ. ನಾವು ಹಗಲು ಹೊತ್ತು ಹೋರಾಟ ಮಾಡಿ, ರಾತ್ರಿ ಹೊತ್ತು ರಾಜಿ ಮಾಡ್ಕೊಳ್ಳಲ್ಲ ಅನ್ನೋದೂ ಅವರಿಗೆ ಗೊತ್ತಾಗಿದೆ.

***ಈ ವಿಷಯವನ್ನ ಯಾರನ್ನಾದ್ರು ಮನಸ್ಸಿನಲ್ಲಿಟ್ಕೊಂಡೇ ಹೇಳ್ತಾ ಇದ್ದೀರ?***

ಈಗ ದೆಹಲಿಗೆ ಹೋಗಿ, ಪ್ರತಿಭಟಿಸಿದ್ದಾರಲ್ಲ, ಅದು ಪ್ರಚಾರಕ್ಕಲ್ಲದೆ ಮತ್ಯಾಕೆ?

***ವಾಟಾಳ್ ನಾಗರಾಜ್ ರವರು ಮತ್ತು ನೀವು ಬೇರೆ ಬೇರೆ ದಿಕ್ಕುಗಳಲ್ಲಿ ಹೋಗ್ತಾ ಇದ್ದೀರ ಅಂತ ಹೇಳ್ತಾರಲ್ಲ?***

ರಾಜ್ಯದ ಜನತೆಗೆ ಗೊತ್ತಿದೆ, ಕನ್ನಡ ಪರ ಹೋರಾಟ, ನಿಂತ ನೀರಾಗಿತ್ತು. ಬಹಳಷ್ಟು ಮಂದಿ, ಇನ್ನು ಹೋರಾಟ ಸಾಕು ಅಂತ ಕೈ ಚೆಲ್ಲಿ ಕೂತಿದ್ರು. ಆಗ ಇವರನ್ನೆಲ್ಲ ಪುನಃ ಹೋರಾಟಕ್ಕೆ ಇಳಿಯುವಂತೆ ಮಾಡಿದ್ದು ಕರ್ನಾಟಕ ರಕ್ಷಣಾ ವೇದಿಕೆ.

***ಇತ್ತೀಚಿನ ಕರ್ನಾಟಕ ಬಂದ್‌ನ ಸಂಧರ್ಭದಲ್ಲಿ ನೀವು ಹೇಳಿದ್ರಾ, 'ಬಂದ್‌ಗೆ ಬೇರೆಯವರು ಕರೆ ಕೊಟ್ರು ಆದ್ರೆ ಅದನ್ನ ಯಶಸ್ವಿಗೊಳಿಸಿದವನು ನಾವು' ಅಂತ?***

ನಾವು ಹೇಳಿಲ್ಲ, ಅದನ್ನ ಜನ ಹೇಳ್ತಾ ಇದ್ದಾರೆ. ಸಾವಿರಾರು ಮಂದಿ ರಕ್ಷಣಾ ವೇದಿಕೆ ಕಾರ್ಯಕರ್ತರು ಈ ತಿಂಗಳ ಇಪ್ಪತ್ತೇಳರಂದು ದೆಹಲಿಗೆ ಹೋಗ್ತಾ ಇದ್ದಾರೆ. ಕರ್ನಾಟಕದಲ್ಲಿ ಮಾತ್ರ ಇದ್ದಂತಹ ಹೋರಾಟವನ್ನ ದೆಹಲಿಗೆ ತೆಗೆದುಕೊಂಡು ಹೋದ ಕೀರ್ತಿ ರಕ್ಷಣ ವೇದಿಕೆಯದ್ದಾಗಿರ್ತದೆ. ನಾವು ಪ್ರಾಮಾಣಿಕವಾಗಿ ಹೋರಾಟ ಮಾಡ್ತಾ ಇದ್ರೆ ಆ ಸಂದರ್ಭದಲ್ಲಿ ಬೇರೆಯವರು ಗೊಂದಲ ಉಂಟು ಮಾಡ್ಲಿಕ್ಕೆ ಪ್ರಯತ್ನಿಸ್ತಿರ್ತಾರೆ. ಅದರ ಬಗ್ಗೆ ಜನ ಪ್ರಶ್ನಿಸ್ತಿದ್ದಾರೆ. ಬೇರೆಯವರ ಹೋರಾಟಗಳಲ್ಲಿ ಇಪ್ಪತ್ತು ಮೂವತ್ತು ಮಂದಿ ನಾಯಕರ ಗುಂಪಿದ್ರೆ, ಅಲ್ಲಿ ನೂರು ಜನ ಕಾರ್ಯಕರ್ತರು ಇರೋದಿಲ್ಲ. ಎಷ್ಟು ಹಾಸ್ಯಾಸ್ಪದವಾಗಿದೆ.

***ಕೆಲವು ಹಿರಿಯ ಕನ್ನಡ ಹೋರಾಟಗಾರರು ಹೇಳ್ತಾರೆ, ನಿಮ್ಮ ಹೋರಾಟದ ರೀತಿ ಸರಿ ಇಲ್ಲ, ಅಂತ?***

ಇವತ್ತು ಕೆಲವರು, ನಮ್ಮ ಹೋರಾಟವನ್ನ ಸಹಿಸ್ಕೊಳ್ಳಿಕ್ಕಾಗದಂತಹ ಜನ ಅಂತಹದನ್ನ ಹೇಳಬಹುದು. ಶ್ರೀಸಾಮಾನ್ಯರು ನಮ್ಮ ಹೋರಾಟದ ರೀತಿಯನ್ನ ಒಪ್ಕೊಂಡಿದ್ದಾರೆ. ವಿದೇಶಗಳಿಂದ ಜನ ಹಣ ಸಹಾಯವನ್ನೂ ಮಾಡ್ತಾ ಇದ್ದಾರೆ. ತಪ್ಪಾದಾಗ ತಿದ್ದಿಕೊಳ್ಳಿ ಅಂತ ಅನೇಕ ಮಂದಿ ಪತ್ರ ಬರೀತಾರೆ.

***ನಾರಾಯಣ ಗೌಡ್ರು, ಇಲ್ಲಿ ತನಕ ಹೋರಾಟ ಮಾಡ್ಕೊಂಡು ಬಂದಿರುವ ಹಿರಿಯ ಹೋರಾಟಗಾರರ ಬಗ್ಗೆ ಗೌರವ ಇಟ್ಕೊಂಡಿಲ್ಲ, ಅಂತಾರಲ್ಲ?***

ನಿಜವಾದ ಕನ್ನಡದ ಕಳಕಳಿಯನ್ನ ಇಟ್ಕೊಂಡಿರುವ ನಾಯಕರ ಬಗ್ಗೆ ನನಗೆ ಗೌರವ ಇದೆ ಮತ್ತು ಅವರ ನಾಯಕತ್ವದ ಅಡಿಯಲ್ಲಿ ಕೆಲಸ ಮಾಡ್ಲಿಕ್ಕೆ ಇಷ್ಟ ಪಡುವಂತವನು, ನಾನು. ಆದ್ರೆ ಸ್ವಾರ್ಥಕ್ಕಾಗಿ ಅಥವಾ ಪ್ರಚಾರಕ್ಕಾಗಿ ಹೋರಾಟ ಮಾಡುವ ಸ್ವಯಂಘೋಷಿತ ನಾಯಕರುಗಳ ವಿರುದ್ಧ ನನಗೆ ಸಿಟ್ಟಿದೆ.

ಕಲ್ಲು ಹೊಡೆಯೋರು, ಹೋರಾಟ ಮಾಡುವವರು ಯಾರೋ ಆದ್ರೆ, ಲಾಭ ಪಡ್ಕೊಳ್ಳೋರು ಯಾರೋ. ಅದನ್ನೆಲ್ಲ ನೋಡಿ, ಬೇಸತ್ತಿದ್ದೇನೆ.
ಇವತ್ತು ಯುವಕರನ್ನ ಒಗ್ಗೂಡಿಸಿ ರಕ್ಷಣಾ ವೇದಿಕೆಯನ್ನ ಕಟ್ಟಿರೋದು ಯಾರ ವಿರುದ್ಧದ ದ್ವೇಷಕ್ಕೂ ಅಲ್ಲ, ಸಿಟ್ಟಿಗೂ ಅಲ್ಲ. ಹೋರಾಟಗಾರ ರಾಮಮೂರ್ತಿಯಂತವರು ನಮಗೆ ಸ್ಫೂರ್ತಿ.

***ನೀವೂ ಕೂಡ ನಿಮ್ಮ ಹೋರಾಟವನ್ನ ಮತ್ತು ರಕ್ಷಣಾ ವೇದಿಕೆಯನ್ನ ನಿಮ್ಮ ವೈಯುಕ್ತಿಕ ಬಲವರ್ಧನೆಗೆ ಬಳಸಿಕೊಂಡಿದ್ದೀರ, ಅಂತ?***

ರಕ್ಷಣಾ ವೇದಿಕೆಯನ್ನ ಹುಟ್ಟು ಹಾಕಿದ್ದು ನಾನು, ಆದ್ರೂ ನಾಯಕರ ಅವಶ್ಯಕತೆ ಇದ್ದಿದ್ರಿಂದ ಕೆಲವರನ್ನ ನಾಯಕರನ್ನಾಗಿ ಮಾಡಬೇಕಾಯ್ತು. ನಾರಾಯಣಗೌಡ್ರು ಆರ್ಥಿಕವಾಗಿ ಬಲಿಷ್ಠವಾಗಿದ್ದಾಗ ರಕ್ಷಣಾ ವೇದಿಕೆಯನ್ನ ಸ್ಥಾಪಿಸಿದ್ದು. ಆಗ ನನ್ನ ವ್ಯಾಪಾರ ವ್ಯವಹಾರ ಚೆನ್ನಾಗಿತ್ತು. ಮಹಾರಾಷ್ಟ್ರದಲ್ಲಿದ್ದಾಗ ಅಲ್ಲಿ ಕನ್ನಡಿಗರ ಮೇಲೆ ಶಿವಸೇನೆ ಮಾಡಿದ್ದ ದಬ್ಬಾಳಿಕೆ ನೋಡಿ ಆ ನೋವಿನಿಂದ ಒಳಗೊಂದು ಕಿಚ್ಚು ಇಟ್ಟುಕೊಂಡು ಬಹಳ ವರ್ಷ ಕಾದು, ನನ್ನ ಸಂಪಾದನೆ ಮಾಡಿದ ಹಣವನ್ನೆಲ್ಲ ಕಳ್ಕೊಂಡು ಈ ರಕ್ಷಣಾ ವೇದಿಕೆಯನ್ನ ಕಟ್ಟಿದ್ದೇನೆ. ರಕ್ಷಣಾ ವೇದಿಕೆಯ ಆರಂಭಕ್ಕೆ ಮೊದಲು ನಾನು ಹೇಗಿದ್ದೆ ಮತ್ತು ಈಗ ಹೇಗಿದ್ದೀನಿ ಅನ್ನೋದನ್ನ ನೋಡ್ಬೇಕಾಗ್ತದೆ.

***ನಿಮ್ಮನ್ನ ಬಿಟ್ಟು ಹೋದ ಜನ, ಬಹಳಷ್ಟು ಮಂದಿ, ಆರಂಭದಿಂದಲೂ ನಿಮ್ಮೊಂದಿಗಿದ್ದವರು, ಅಂತಹವರು ನಿಮ್ಮನ್ನು ಯಾಕೆ ಬಿಟ್ಟು ಹೋದ್ರು?***

ನಮ್ಮಿಂದ ಬಿಟ್ಟು ಹೋದ ಮಂದಿ ತುಂಬಾ ಜನ ಏನಲ್ಲ. ಬಿಟ್ಟು ಹೋದವರೂ ಅವ್ರಾಗೇನೂ ಬಿಟ್ಟು ಹೋಗ್ಲಿಲ್ಲ, ಅವರನ್ನ ಸಂಘಟನೆಯಿಂದ ಹೊರ ಹಾಕಲಾಯಿತು.

***ಇವತ್ತು ನಾರಾಯಣಗೌಡರ ಬಣ ಮತ್ತು ಪ್ರವೀಣ್ ಶೆಟ್ಟಿ ಬಣ ಅಂತ ಜನ ಗುರುತಿಸೋದ್ರಿಂದ ಇವತ್ತು ಯಾರು ಏನು ಮಾಡಿದ್ರೂ ಅದು ರಕ್ಷಣಾ ವೇದಿಕೆ ಮಾಡಿದೆ ಅಂತ ಆಗಲ್ವಾ?***

ಅದು ಆಗಿದೆ. ಮೊನ್ನೆ ಒಂದು ಸಂದರ್ಭದಲ್ಲಿ ಆ ಗುಂಪಿನವರು ಹೋಗಿ ದಾಂಧಲೆ ಮಾಡಿದ್ರು. ಆದ್ರೆ ಜನ ಅದನ್ನ ನನ್ನ ನಾಯಕತ್ವದ ರಕ್ಷಣಾ ವೇದಿಕೆಯ ಕಾರ್ಯಕರ್ತರು ಮಾಡಿದ್ರು ಅಂದ್ಕೊಂಡು ಬೇಸರ ವ್ಯಕ್ತಪಡಿಸಿದರು. ಇವತ್ತೂ ಹೇಳ್ತೀನಿ ನಾನು, ರಕ್ಷಣಾ ವೇದಿಕೆಯ ಯಾವ ಬಣಾನೂ ಇಲ್ಲ. ಇರೋದು ಒಂದೇ ಒಂದು ಕರ್ನಾಟಕ ರಕ್ಷಣಾ ವೇದಿಕೆ. ನಾನು ಪತ್ರಿಕೆಗಳಿಗೂ ಸ್ಪಷ್ಟ ಪಡಿಸಿದ್ದೇನೆ. ನ್ಯಾಯಾಲಯದಲ್ಲಿ ಕೂಡ ನಮ್ಮ ಪರವಾಗಿ ತೀರ್ಪು ಬಂದಿದೆ. ರಕ್ಷಣಾ ವೇದಿಕೆಯ ಹೆಸರಲ್ಲಿ ಕೆಲವರು ದಾಂಧಲೆ ಮತ್ತು ಹಣವಸೂಲಿಯನ್ನೂ ಮಾಡ್ತಾ ಇದ್ದಾರೆ

ಅನ್ನೋದೂ ನಮ್ಮ ಗಮನಕ್ಕೆ ಬಂದಿರೋದ್ರಿಂದ, ತಕ್ಷಣ ಕ್ರಮ ಕೈಗೊಳ್ಳಬೇಕು ಅಂತ ಅಧಿಕಾರಿಗಳಿಗೆ ಮನವಿ ಮಾಡಿದ್ದೇವೆ. ಆ ವಿಷಯದಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನ ಹೂಡ್ಲಿಕ್ಕೂ ತಯಾರಾಗಿದ್ದೇವೆ.

***ಈಗ ಸಿಕ್ತಿರೋ ಬೆಂಬಲ ನೋಡಿ ಇದನ್ನ ರಾಜಕೀಯ ಶಕ್ತಿಯಾಗಿ ಮಾರ್ಪಡಿಸುವ ಆಸಕ್ತಿ ಇದೆಯಾ?***

ಜನ ಆ ತೀರ್ಮಾನಕ್ಕೆ ಬರುವವರೆಗೂ ರಕ್ಷಣಾ ವೇದಿಕೆ ಯಾವತ್ತೂ ಆ ದಿಕ್ಕಿನಲ್ಲಿ ಯೋಚನೆ ಮಾಡೋದಿಲ್ಲ. ಆದ್ರೆ, ಇವತ್ತು ಕರ್ನಾಟಕದ ಗ್ರಾಮಗ್ರಾಮಕ್ಕೂ ರಕ್ಷಣಾ ವೇದಿಕೆ ತಲುಪಿದೆ. ಅದರಿಂದ ಕೆಲವೊಮ್ಮೆ ರಾಜಕೀಯ ನಾಯಕರಿಗೆ ಆತಂಕವೂ ಆರಂಭವಾಗಿಬಿಟ್ಟಿದೆ. ಆ ಕಾರಣದಿಂದಾಗಿ ಕೆಲವು ರಾಜಕೀಯ ನಾಯಕರು ನಮ್ಮ ವಿರೋಧಿಗಳನ್ನ ಬಳಸ್ಕೋತಿದ್ದಾರೆ.

***ಈಗ ನಿಮ್ಮೊಂದಿಗಿರೋ ಯುವಶಕ್ತಿ ಮತ್ತು ಸಿಕ್ಕಿರೋ ಬೆಂಬಲ ನೋಡಿ 'ನಾನು ಏನೇನು ಬೇಕಾದ್ರೂ ಮಾಡಬಹುದು', ಅನ್ನಿಸಿದೆಯಾ?***

ಹಾಗೆ ಅನ್ನಿಸಿದ್ದಿದ್ರೆ, ನಾರಾಯಣಗೌಡ್ರು ಕತೆ ಈಗಾಗಲೇ ಮುಗಿದುಹೋಗ್ಬಿಟ್ಟಿರ್ರೋದು. ಬೇರೆ ಹೋರಾಟಗಾರರಿಗೂ ನಮಗೂ ಅದೇ ವ್ಯತ್ಯಾಸ. ಇರೋ ಶಕ್ತಿಯನ್ನ ದುರ್ಬಳಕೆ ಮಾಡುವ ಅಥವಾ ಅದರಿಂದ ದುರಹಂಕಾರ ಪಡುವ ಜಾಯಮಾನ ನನ್ನದಲ್ಲ. ಏನೇ ಮಾಡುವಾಗಲೂ ಹಿರಿಯರ ಮತ್ತು ತಿಳಿದವರ ಮಾರ್ಗದರ್ಶನ ತೆಗೊಂಡೇ ಪ್ರತಿ ಹೆಜ್ಜೆಯನ್ನೂ ಇಡುವ ಪ್ರಯತ್ನ ಮಾಡ್ತೇನೆ. ಸಂಘಟನೆ ಬೆಳೆಸುವಾಗ ಒಂದು ರೀತಿ ಇತ್ತು ಆದ್ರೆ ಈಗ ಬೆಳೆದಂತದ್ದನ್ನ ಕಾಪಾಡ್ಕೊಳ್ಳೋದು ಬಹಳ ಮುಖ್ಯ. ನಾನು ರಕ್ಷಣಾ ವೇದಿಕೆಯ ನಾಯಕನಾಗಿದ್ರೂ, ಅದಕ್ಕಿಂತ ಪ್ರಮುಖವಾಗಿ ನಾನು ಆ ಸಂಘಟನೆಯ ಒಬ್ಬ ಕಾರ್ಯಕರ್ತ.

***ಇವತ್ತಿನ ತನಕ ನಿಮ್ಮ ಹೋರಾಟಗಳಲ್ಲಿ ದಾರಿ ತಪ್ಪಲಿಕ್ಕೆ ಅವಕಾಶಗಳಿದ್ವಾ?***

ಇದ್ವು. ಅನೇಕರು ಅನೇಕ ರೀತಿಯ ಆಸೆಗಳನ್ನ ತೋರ್ಸಿದ್ರು. ನನ್ನ ಕಾರ್ಯಕರ್ತರಿಗೆ ಯಾವತ್ತೂ ದ್ರೋಹವೆಸಗಬಾರದು ಅನ್ನೋದಕ್ಕೋಸ್ಕರ ಪ್ರಾಮಾಣಿಕವಾಗಿ ಕೆಲಸ ಮಾಡ್ತಾ ಬಂದಿದ್ದೇನೆ. ನಾನು ಅಂತಹ ಆಸೆಗಳಿಗೆ ಬಲಿಯಾಗಿದ್ದಿದ್ರೆ ಇವತ್ತು ನಾನು ಯಾರ್ದೋ ಜೊತೆ ಹೋಗ್ಬಹುದಿತ್ತು, ಇಲ್ಲ ಏನಾದ್ರು ದುರಂತವಾಗ್ಬಿಡ್ತಿತ್ತು.